**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಚನ್ನರಾಯಪಟ್ಟಣ**

**ಸಿಸಿ ಸಂಖ್ಯೆ: 2782/2021**    **CW-1**  **PW-1**

**ಸಾಕ್ಷಿಯನ್ನು ದಿಃ 10.09.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಹೆಸರುಃ | ರೂಪ |
| ಗಂಡನ ಹೆಸರುಃ | ಬಾಲಕೃಷ್ಣ |
| ವಯಸ್ಸುಃ | 40 ವರ್ಷ |
| ವೃತ್ತಿಃ | ಗೃಹಿಣಿ |
| ವಾಸ ಸ್ಥಳಃ | ಕರಿಮಾರನಹಳ್ಳಿ ಗ್ರಾಮ |

**ಮುಖ್ಯವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಚಾಸಾ-2 ನನ್ನ ಮಗಳು. ಚಾಸಾ-2 ರಿಂದ ಚಾಸಾ-8 ಪರಿಚಯವಿದೆ. ಆರೋಪಿ ನನ್ನ ಗಂಡ.

ದಿಃ 15.08.2021 ರಂದು ನಾನು ಮತ್ತು ನನ್ನ ಮಗಳು ಮನೆಯಲ್ಲಿದ್ದಾಗ ಮದ್ಯಾಹ್ನ 3.30 ರ ಸಮಯದಲ್ಲಿ ಆರೋಪಿ ಮನೆಯ ಒಳಗೆ ಬಂದು ಅವಾಚ್ಯ ಶಬ್ದಗಳಿಂದ ಬೈದು ಏಕಾಏಕಿ ತನ್ನ ಕೈಗಳಿಂದ ಸೊಂಟಕ್ಕೆ, ಬೆನ್ನಿಗೆ, ಎದೆಗೆ ಹೊಡೆದು ಕುತ್ತಿಗೆ ಹಿಸುಕಿರುತ್ತಾರೆ. ಅದೇ ರೀತಿ ನನ್ನನ್ನು ಕೊಲೆ ಮಾಡುವುದೇ ಬಿಡುವುದಿಲ್ಲ ಎಂದು ಕೊಲೆ ಬೆದರಿಕೆ ಹಾಕಿರುತ್ತಾರೆ. ಆ ಸಮಯದಲ್ಲಿ ಚಾಸಾ-3 ರಿಂದ ಚಾಸಾ-5 ರವರು ಬಂದು ಜಗಳ ಬಿಡಿಸಿರುತ್ತಾರೆ. ನನಗಾದ ಗಾಯಗಳಿಂದ ನಾನು ಚನ್ನರಾಯಪಟ್ಟಣದ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ಆಗ ನನ್ನಿಂದ ಹೇಳಿಕೆ ದೂರನ್ನು ಪಡೆದಿರುತ್ತಾರೆ.

ಸಾಕ್ಷಿಗೆ ದೂರನ್ನು ತೋರಿಸಲಾಗಿ, ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಮಹಜರ್ ನ್ನು ತೋರಿಸಲಾಗಿ, ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ದಿಃ 19.08.2021 ರಂದು ಮದ್ಯಾಹ್ಣ 12.30 ರ ಸಮಯದಲ್ಲಿ ಪೋಲೀಸರು ನಮ್ಮ ಮನೆಗೆ ಬಂದು ಮಹಜರ್ ಕ್ರಮ ಜರುಗಿಸಿರುತ್ತಾರೆ. ನನ್ನ ಜೊತೆ ನಿಪಿ–2 ಕ್ಕೆ ಚಾಸಾ–3 ರಿಂದ ಚಾಸಾ–7 ರವರು ಸಹಿ ಮಾಡಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಡಿ ಬಿ ಬಿ ರವರಿಂದ . ವಕೀಲರಿಂದಃ**

ನನ್ನ ಮತ್ತು ಆರೋಪಿಯ ಮದುವೆಯಾಗಿ 17 ವರ್ಷ ಆಗಿದೆ. ನನಗೆ ಒಬ್ಬಳೇ ಮಗಳು. ಆರೋಪಿಯ ವಿರುದ್ಧ ನಾನು ಭಾಗಕ್ಕಾಗಿ ದಾವೆಯನ್ನು ಹೂಡಿದ್ದೇನೆ ಎಂದರೆ ಸರಿ. ಮದುವೆಯಾದ ಪ್ರಾರಂಭದಲ್ಲಿ ನಾನು ಮತ್ತು ಆರೋಪಿ ಚೆನ್ನಾಗಿದ್ದೆವು ಎಂದರೆ ಸರಿ. ನನ್ನಿಂದ ಹೇಳಿಕೆ ಪಡೆದ ಪೋಲೀಸರ ಹೇಸರು ಹೇಳಲಾಗುವುದಿಲ್ಲ. ಚಾಸಾ–3 ರಿಂದ ಚಾಸಾ–8 ರವರು ನನ್ನ ಅಕ್ಕಪಕ್ಕದ ಮನೆಯವರಾಗಿದ್ದು ಚೆನ್ನಾಗಿದ್ದಾರೆ ಎಂದರೆ ಸರಿ. ಆ ದಿನ ಯಾವುದೇ ಗಲಾಟೆ ಆಗಿಲ್ಲ, ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವಂತೆ ನನಗೆ ಹೊಡೆದಿದ್ದಾರೆ ಎಂದರೆ ಸರಿಯಲ್ಲ. ಪೊಲೀಸರು ನಮ್ಮ ಮನೆ ಬಳಿ ಬಂದಿಲ್ಲ ಎಂದರೆ ಸರಿಯಲ್ಲ. ಮಹಜರ್ ಗೆ ಬರುವ ಮೊದಲು ಪೊಲೀಸರು ನನಗೆ ಯಾವುದೇ ನೋಟೀಸ್ ನೀಡಿಲ್ಲ. ಆರೋಪಿಗೆ ತೊಂದರೆ ನೀಡಲು ಅವರ ವಿರುದ್ಧ ಸುಳ್ಳು ದೂರು ನೀಡಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ).**

**ಓ ಹೇ ಕೇ ಸರಿ ಇದೆ.**

**(ಕುಸುಮ ವಿ.)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.**